ಪ್ರಭಾವವನ್ನು ಬೀರಿ, ತಮ್ಮ ಇಚ್ಛೆ ಬಂದಂತೆ ನಿರ್ಣಯ ಮಾಡುವುದಕ್ಕೆ ಅಲ್ಲ, ಅದು ಆಗಬಾರದು ಎಂದು.

ಶ್ರೀ ಡಿ.ಆರ್.ಪಟೇಲ್: ಚುನಾವಣೆ ಎಂದು ಏನು ಕರೆದಿರುತ್ತಾರಲ್ಲಾ, ಆ ಸಭೆಯಲ್ಲಿ ಶಾಸಕರಿಗೆ ಮತದಾನದ ಹಕ್ಕಿಲ್ಲ. ನಾವು ಭಾಗವಹಿಸುವುದಕ್ಕೆ ಅವಕಾಶವಿಲ್ಲ. ಚುನಾವಣೆಗೆ ಮಾತ್ರ ಕರೆದಂಥ ಸಭೆಯಲ್ಲಿ....

ಅಧ್ಯಕ್ಷರು: ಈಗ ಸುರೇಶ್‌ಕುಮಾರ್‌ರವರೇ ತಾವು ಪ್ರಸ್ತಾಪ ಮಾಡಿ.

(ಆ) ಬೆಂಗಳೂರು ನಗರದ ಯಶವಂತಪುರದಲ್ಲಿರುವ ಸುಬೇದಾರ್ ಪಾಳ್ಯದ ಹಿರಿಯ ಪ್ರಾಥಮಿಕ ಶಾಲೆಗೆ ಸಂಬಂಧಿಸಿದಂತೆ.

+ ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಬೆಂಗಳೂರಿನಲ್ಲಿ ನಡೆದಂಥ ಘಟನೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಾ ಬೆಂಗಳೂರಿನಲ್ಲಿ ಸರ್ಕಾರಿ ಶಾಲೆಗಳ ಬಗ್ಗೆ....

ಅಧ್ಯಕ್ಷರು: ಒಂದೇ ಒಂದು ನಿಮಿಷ ಗೈಡ್ ಮಾಡಿಬಿಡುತ್ತಿದ್ದೇನೆ. ಈಗ ಶೂನ್ಯವೇಳೆ ಪ್ರಾರಂಭ ಮಾಡುತ್ತೇವೆ. ಶೂನ್ಯ ವೇಳೆಯಲ್ಲಿ ಡಿಸ್‌ಕಷನ್ ಇರುವುದಿಲ್ಲ. ಪ್ರಸ್ತಾಪ ಮಾಡುವವರು ಒಂದೂವರೆಯಿಂದ ಎರಡು ನಿಮಿಷದೊಳಗಾಗಿ ಮುಗಿಸಬೇಕು. The Government should give the reply. That will be the procedure. Please all of you should adhere to the procedure.

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಒಂದು ಉದಾಸೀನ ಪ್ರವೃತ್ತಿ ಏನಿದೆ, ಅದಕ್ಕೆ ಒಂದು ತಾಜಾ ಉದಾಹರಣೆ ನಿನ್ನೆ ಬೆಂಗಳೂರಿನಲ್ಲಿ ನಡೆದಿದೆ. 1940ನೇ ಇಸವಿಯಿಂದ ಅಸ್ತಿತ್ವದಲ್ಲಿ ಒಂದು ಶಾಲೆ ಇತ್ತು. ಅದನ್ನು ಮುಂಚೆ ವೈಯಾಳಿ ಕಾವಲ್ ಮಾದರಿ ಪ್ರಾಥಮಿಕ ಶಾಲೆ ಎಂದು ಕರೆಯುತ್ತಾ ಇದ್ದರು. ಅದರ ನಂತರ ಹೆಚ್.ಮುನಿಸ್ವಾಮಿರೆಡ್ಡಿ ಸರ್ಕಾರಿ ಮಾದರಿ ಶಾಲೆ ಎಂದು ಕರೆದರು. ಸುಮಾರು 800 ಜನ ಬಾಲಕ-ಬಾಲಕಿಯರು ಆ ಶಾಲೆಯಲ್ಲಿ ಓದುತ್ತಾ ಇದ್ದಾರೆ. ಪರಿಸ್ಥಿತಿ ಹೀಗಿರುವಾಗ ಯಾರೋ ಗೋವಿಂದರೆಡ್ಡಿ ಎನ್ನುವ ಒಬ್ಬ ವ್ಯಕ್ತಿ ಶಾಲೆಯ ಮೇಲೆ ಕೇಸ್ ಹಾಕಲಿಲ್ಲ. ಶಿಕ್ಷಣ ಇಲಾಖೆಯ ಮೇಲೆ ಕೇಸು ಹಾಕಲಿಲ್ಲ. ಆದರೆ ಯಾವುದೋ ಅಂದು ಬೆಟರ್‌ಮೆಂಟ್ ಕಮಿಟಿಯ ಮೆಂಬರ್ ಆಗಿದ್ದ ತಿಮ್ಮಪ್ಪಯ್ಯ ಎನ್ನುವ ವ್ಯಕ್ತಿಯ ಮೇಲೆ 1980ನೇ ಇಸವಿಯಲ್ಲಿ ಕೇಸು ಹಾಕಿ 17 ವರ್ಷ ಕೇಸು ನಡೆದಿದೆ. ನಿನ್ನೆ ಎಕ್ಸಿಕ್ಯೂಷನ್ ಆರ್ಡರನ್ನು ತಂದು ಪೋಲೀಸರ ನೆರವನ್ನು ತೆಗೆದುಕೊಂಡು ಆ ಶಾಲೆಯ ಕಟ್ಟಡವನ್ನು

ಒಡೆದು ಹಾಕಿಸಿದ್ದಾನೆ. ಆ ಮಕ್ಕಳನ್ನೆಲ್ಲಾ ಇವತ್ತು ಬೀದಿಗೆ ಎಸೆದಿದ್ದಾರೆ. ನನ್ನ ಪ್ರಶ್ನೆ ಇರುವುದು ನಮ್ಮ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಖಾಸಗಿ ಶಾಲೆಗಳಿಗೆ ಆಗಾಗ್ಗೆ ಭೇಟಿ ಕೊಡುತ್ತಿರುತ್ತಾರೆ. ಅವರು ಉಪಚಾರವನ್ನು ಎದುರಿಸುವುದಕ್ಕೆ, ಸರ್ಕಾರಿ ಶಾಲೆಗಳಿಗೆ ಹೋಗಿ ನಿಮಗೇನು ತೊಂದರೆ ಇದೆ ಎಂದು ಅವರೂ ಕೇಳಲಿಲ್ಲ. ಶಾಲೆಯ ಮುಖ್ಯಸ್ಥರೂ ಕೂಡ ಬಂದು ಹೇಳಲಿಲ್ಲ. ನೂರಾರು ಬಾಲಕರು ಬೀದಿಗೆ ಬಂದಿದ್ದಾರೆ. ಡಿ.ಡಿ.ಪಿ.ಐ. ಸಿ.ಪಿ.ಐ. ಎ.ಇ.ಒ. ಬಿ.ಇ.ಒ ಇಷ್ಟೆಲ್ಲಾ ಅಧಿಕಾರಿಗಳು ಇದ್ದರೂ ಕೂಡ 17 ವರ್ಷದಿಂದ ಕೇಸು ನಡೆಯುತ್ತಾ ಇದ್ದರೂ ಕೂಡ ಈಗಾಗಲೇ 6 ತಿಂಗಳ ಹಿಂದೆ ಇದೇ ಎಕ್ಸಿಕ್ಯೂಷನ್ ವಾರೆಂಟ್ ತಂದಾಗ ಜನ ಎಲ್ಲಾ ಆಚೆಗೆ ಕಳುಹಿಸಿದರೂ ಕೂಡ 13-3-96ನೇ ಇಸವಿಯಲ್ಲಿ, ಒಂದು ವರ್ಷದ ಹಿಂದೆ ಆ ಕ್ಷೇತ್ರದ ಶಾಸಕರಿಗೆ ಇದರ ಬಗ್ಗೆ ಮಾಹಿತಿ ಕೊಟ್ಟಿದ್ದರೂ ಕೂಡ ಸಾರ್ವಜನಿಕ ಶಿಕ್ಷಣ ಇಲಾಖೆಯ ಉದಾಸೀನ ಪ್ರವೃತ್ತಿಯಿಂದ ಇವತ್ತು ನೂರಾರು ಜನ ಬಾಲಕರು ಬೀದಿಗೆ ಬಂದಿದ್ದಾರೆ. ಆ ಬಡವರು ವಿದ್ಯಾಭ್ಯಾಸ ಮಾಡುವುದು ಹೇಗೆ? ಯಾವ್ಯಾವುದೋ ಆಧಾರದ ಮೇಲೆ ನಾನ್ ಜಾಯಿಂಡರ್, ಮಿಸ್ ಜಾಯಿಂಡರ್ ಪಾರ್ಟೀಸ್ ಮಾಡಿ ಕೋರ್ಟುಗಳಲ್ಲಿ ಆದೇಶವನ್ನು ತಂದಾಗಲೂ ಕೂಡ, ಗಮನಕ್ಕೆ ಬಂದರೂ ಕೂಡ ಶಿಕ್ಷಣ ಇಲಾಖೆ ತೆಗೆದುಕೊಳ್ಳಬೇಕಾದ ರೀತಿಯಲ್ಲಿ ತೆಗೆದುಕೊಳ್ಳದೆ ಇರುವುದರಿಂದ ಇವತ್ತು ಬಡ ಮಕ್ಕಳವಿದ್ಯಾಭ್ಯಾಸಕ್ಕೆ ಕಲ್ಲು ಬಿದ್ದಂತಾಗಿದೆ ಅದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

+ ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ನಗರದ ಯಶವಂತಪುರದಲ್ಲಿರುವ ಸುಬೇದಾರ್‌ಪಾಳ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯು ಶ್ರೀ ತಿಮ್ಮಪ್ಪಯ್ಯನವರು ಶಾಲೆಯ ಸ್ಥಳವನ್ನು ದಾನನೀಡಿ ಶಾಲಾ ಕೊಠಡಿಗಳನ್ನು ತಮ್ಮ ಸ್ವಂತ ಖರ್ಚಿನಿಂದ ಕಟ್ಟಿಸಿಕೊಟ್ಟಿರುತ್ತಾರೆ. ನಂತರ ಈ ಶಾಲಾ ನಿವೇಶನದ ಒಂದು ಭಾಗ ತಮಗೆ ಸೇರಿದ್ದೆಂದು ಶ್ರೀ.ಗೋವಿಂದರೆಡ್ಡಿ ಎನ್ನುವವರು 1980ರಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. (ಅಡಿಷನಲ್ ಸಿವಿಲ್ ಸಿಟಿ ಕೋರ್ಟ್) ದಾವೆ ಸಂಖ್ಯೆ 145/96 (ಒ.ಎಸ್.9894:90 ಮತ್ತು 566:87) ಈ ದಾವೆಯಲ್ಲಿ ಇಲಾಖೆಯನ್ನಾಗಲಿ ಅಥವಾ ಸರ್ಕಾರವನ್ನಾಗಲಿ ಪ್ರವಾದಿಗಳನ್ನಾಗಿ ಮಾಡಿರುವುದಿಲ್ಲ. ಇದರಿಂದ ಅನೇಕ ವರ್ಷಗಳಕಾಲ ಈ ದಾವೆಯ ಬಗ್ಗೆ ಇಲಾಖೆಯ ಗಮನಕ್ಕೆ ಬಾರದೇ ಶ್ರೀ ಗೋವಿಂದ ರೆಡ್ಡಿ ಮತ್ತು ಶ್ರೀ ತಿಮ್ಮಪ್ಪಯ್ಯ ಇವರ ಮಧ್ಯದಲ್ಲಿಯೇ ದಾವೆ ನಡೆದು ದಿನಾಂಕ: 26-1096ರಲ್ಲಿ ದಾವೆ ತೀರ್ಮಾನವಾಗಿ ನಾಲ್ಕು ಕೊಠಡಿಗಳನ್ನು ಕೆಡವಲು ನ್ಯಾಯಾಲಯದ ಆದೇಶವಾಗಿದ್ದು, ಅದರಂತೆ ಪೋಲೀಸ್ ಸಹಾಯ ಪಡೆದು ಶ್ರೀ ಗೋವಿಂದರೆಡ್ಡಿಯವರು ಶಾಲೆಯ ನಾಲ್ಕು ಕೊಠಡಿಗಳನ್ನು ಕೆಡವಲು ಬಂದಾಗ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಇಲಾಖೆಯು ತುರ್ತಾಗಿ ಈ ವಿಷಯ

ತಿಳಿದ ತಕ್ಷಣವೇ ಉಪನಿರ್ದೇಶಕರು ಹಾಗೂ ಶಿಕ್ಷಣಾಧಿಕಾರಿಗಳು ಬೆಂಗಳೂರು (ಉತ್ತರ ವಲಯ) ಇವರು ಸ್ಥಳ ಪರಿಶೀಲನೆ ಮಾಡಿ ವರದಿ ನೀಡಿರುತ್ತಾರೆ. ಈ ಶಾಲೆಯಲ್ಲಿ 1ರಿಂದ 7ರವರೆಗೆ ತರಗತಿ ನಡೆಯುತ್ತಿದ್ದು ಒಟ್ಟು 14 ವಿಭಾಗಗಳಿವೆ. ಈ ವಿಭಾಗಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ: 565, ಅಟೆಂಡೆನ್ಸ್ ಪ್ರಕಾರ 532 ಬರುತ್ತದೆ; ಇಷ್ಟು ವಿದ್ಯಾರ್ಥಿಗಳಿದ್ದು 19 ಕೊಠಡಿಗಳನ್ನು ಹೊಂದಿರುತ್ತದೆ. ಇದರಲ್ಲಿ ಮೂರು ಕೊಠಡಿಗಳು ಈಗಾಗಲೇ ಕೆಡಿವಿದ್ದು ಸದ್ಯದಲ್ಲಿ ಈಗಿರುವ ವಿದ್ಯಾರ್ಥಿಗಳ ಪಾಠಪ್ರವಚನಗಳಿಗೆ ತೊಂದರೆಯಾಗದಂತೆ ಏರ್ಪಾಡು ಮಾಡಲಾಗಿದೆ. ಅಂದರೆ, ಆ ಮೂರು ಕೊಠಡಿಗಳಲ್ಲಿ ವಿದ್ಯಾಭ್ಯಾಸ ಮಾಡತಕ್ಕಂಥ ಮಕ್ಕಳನ್ನು ಬಾಕಿ ಉಳಿದಿರತಕ್ಕಂಥದ್ದರಲ್ಲಿ ಸೇರಿಸಿ ಪಾಠ ನಡೆಯುತ್ತಿದೆ; ರಸ್ತೆನಲ್ಲಿ ಯಾವ ಹುಡುಗರೂ ಇಲ್ಲ. ಹಾಗೂ ಹೊಸ ಮೂರು ಬೇರೆ ಕೊಠಡಿಗಳನ್ನು ಕಟ್ಟಲು ಒಂದು ಕೊಠಡಿಗೆ 75.000 ರೂ.ನಂತೆ ಒಟ್ಟು ರೂ.2 ಲಕ್ಷ 25 ಸಾವಿರ ರೂಪಾಯಿಗಳನ್ನು ಕೂಡಲೇ ಒದಗಿಸಿ ಕಟ್ಟಡಗಳನ್ನು ಕಟ್ಟಲು ವ್ಯವಸ್ಥೆ ಮಾಡಲಾಗುತ್ತದೆ. ಆಮೇಲೆ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಆರು ತಿಂಗಳ ಹಿಂದೆ ಶಾಸಕರ ಗಮನಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ, ಆ ಶಾಸಕರನ್ನು ಇವತ್ತು ನಾನು ಸಂಪರ್ಕಿಸಿ ಇವತ್ತು, ನಾಳೆ, ಅದರ ಬಗ್ಗೆ ಏನೇನು ಆಗಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುತ್ತೇನೆ.

ಅಧ್ಯಕ್ಷರು: ಗೋವಿಂದೇಗೌಡರು ಹೇಳುವುದರಲ್ಲಿ ಒಂದು ವಿಚಾರವೇನೆಂದರೆ, ಗೆಳೆಯರಿಗೆ ಅವಕಾಶ ಕೊಡುವುದಿಲ್ಲ, ಅದರಿಂದ ನಾನೇ ಹೇಳುತ್ತಿದ್ದೇನೆ. ಇಷ್ಟೊಂದು ದೀರ್ಘವಾಗಿ ವ್ಯವಹಾರ ನಡೆಯುವ ವೇಳೆಗೆ ಇಲಾಖೆಯವರು ತಮ್ಮನ್ನು ಇಂಪ್ಲೀಡ್ ಮಾಡಿಕೊಳ್ಳಬೇಕಾಗಿತ್ತು. ಮಾಡಿಕೊಂಡು ಅವರು ನ್ಯಾಯಾಲಯದ ಮುಂದೆ ಹೋಗಿ, ಹಾಜರಾಗಿ ಮಕ್ಕಳಿದ್ದಾರೆಂದು ಹೇಳುವುದನ್ನು ಬಿಟ್ಟು ಕೊಟ್ಟಿದ್ದಾರೆ; ಇದು, ನಿಮ್ಮ ಇಲಾಖೆಯಲ್ಲಿರುವ ಕೆಳಹಂತದ ಅಧಿಕಾರಿಗಳು ಎಲ್ಲೋ ಒಂದು ಕಡೆ ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡಿಲ್ಲ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಇದರಲ್ಲಿ ಸರ್ಕಾರವನ್ನು ಪಾರ್ಟಿ ಮಾಡಿಲ್ಲ, ವಿದ್ಯಾ ಇಲಾಖೆಯನ್ನೂ ಪಾರ್ಟಿ ಮಾಡಿಲ್ಲ, ಇದು ನಮ್ಮ ಗಮನಕ್ಕೆ ಬಂದಿಲ್ಲ, ಅವರವರೊಳಗೆ ಮಾಡಿಕೊಂಡಿದ್ದಾರಷ್ಟೆ. ಯಾರ್ಯಾರೋ ಮಾಡಿಕೊಂಡಿದ್ದಾರೆ, ನಮ್ಮ ಜವಾಬ್ದಾರಿ ಇದೆ, ನಮಗೆ ನೋಟೀಸ್ ಬಂದರೆ ಲಾಯರ್‌ಗಳನ್ನು ಇಟ್ಟುಕೊಂಡು ನ್ಯಾಯಾಲಯದಲ್ಲಿ ಹಾಜರಾಗಬಹುದು. ನಮಗೆ ಪಾರ್ಟಿನೇ ಮಾಡಿಲ್ಲ.

ಶ್ರೀ ಎಂ.ಶ್ರೀನಿವಾಸ್: ಸಭಾಧ್ಯಕ್ಷರೇ, ನಾನು ಅಲ್ಲಿಗೆ ಹೋಗಿದ್ದೆ, ನೀವು ಉತ್ತರ ಕೊಡುವಾಗ ಎರಡು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೂಡಲೇ ಒದಗಿಸಿ ಕಟ್ಟಡಗಳನ್ನು ಕಟ್ಟಲು ವ್ಯವಸ್ಥೆ ಮಾಡಲಾಗುತ್ತದೆಂದು ಹೇಳಿದರೆ, ನ್ಯಾಯಾಲಯದ ಆದೇಶವಾಗಿರುವಾಗ ಇವನಿಗೆ ಕಟ್ಟುವುದಕ್ಕೆ ಬರುವುದಿಲ್ಲ, ಆ ಉತ್ತರವನ್ನು ಸರಿಯಾಗಿ

ನೀವು ಹೇಳಲಿಲ್ಲ.

ಶ್ರೀ ಎನ್.ಸುರೇಶ್ ಕುಮಾರ್: ಸಭಾಧ್ಯಕ್ಷರೆ, ಹಾಗಾದರೆ ನಾನು ವಿಧಾನಸೌಧದ ಮೇಲೆ ಕೇಸ್ ಹಾಕಿ ಮುಖ್ಯ ಕಾರ್ಯದರ್ಶಿಗಳನ್ನು ಪಾರ್ಟಿ ಮಾಡುವುದಿಲ್ಲ.

ಅಧ್ಯಕ್ಷರು: ಶ್ರೀನಿವಾಸ್‌ರವರೆ, ಇದನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳೋಣ, ಇದನ್ನು ಇಲ್ಲಿಗೆ ಬಿಡಿ.

(ಇ) ಗುತ್ತಿಗೆ ಶಿಕ್ಷಕರ ಸಂಬಳ ಕಡಿತವಾಗುತ್ತಿರುವ ಕುರಿತು.

+ ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಪ್ರಾಥಮಿಕ, ಪ್ರೌಢ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳಿಗೆ ಸೇರಿದಂಥ ಶಿಕ್ಷಕರು ಇವತ್ತು ಬೃಹತ್ ರ್‍ಯಾಲಿ ಮಾಡಿ ಮತ್ತು ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ಮಾಡುವುದೆಂದು ನಿಶ್ಚಯ ಮಾಡಿದ್ದಾರೆ; ಬಹುಶಃ ಇದು ಸರ್ಕಾರದ ಗಮನಕ್ಕೆ ಬಂದಿರಬಹುದೆಂದು ಭಾವಿಸುತ್ತೇನೆ. 1984ನೇ ಇಸವಿಯಲ್ಲಿ ಸರ್ಕಾರ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳಿಗೆ ಸಂಬಂಧಪಟ್ಟ ಸುಮಾರು ಒಂಬತ್ತು ಸಾವಿರ ಶಿಕ್ಷಕರನ್ನು ಮೂಲವೇತನದಲ್ಲಿ ಗುತ್ತಿಗೆ ಆಧಾರದ ಮೇಲೆ ದುಡಿಸಿಕೊಂಡು ಬರುತ್ತಿದ್ದರು. ಹಲವಾರು ಸತ್ಯಾಗ್ರಹವನ್ನೆಲ್ಲಾ ಮಾಡಿ ಕೊನೆಗೆ 20-2-91ರಂದು ಸುಮಾರು ಒಂಬತ್ತು ಸಾವಿರಶಿಕ್ಷಕರ ಸೇವೆಯನ್ನು ಖಾಯಂ ಮಾಡಿ ಸರ್ಕಾರ ಆದೇಶವನ್ನು ಹೊರಡಿಸಿತು. ಆದರೆ ಅಂದು ಆದಂಥ ಒಡಂಬಡಿಕೆಯಲ್ಲಿ 1984 ರಿಂದ 1991ರವರೆಗೆ ವಾರ್ಷಿಕ ಬಡ್ತಿಯನ್ನು ನೀಡಿ ಅವರಿಗೆ ಸಂಬಳವನ್ನು ನಿಗಧಿಮಾಡಲಾಗಿತ್ತು. ಆದರೆ ಇಂದು ರಾಜ್ಯ ಸರ್ಕಾರ 12-6-1997ಕ್ಕೆ ವಿಶೇಷ ರಾಜ್ಯಪತ್ರ ಭಾಗ ನಂ.4 ಸೆಕ್ಷನ್ 2 ಸಿ 1ರ ಆಜ್ಞೆಯ ಪ್ರಕಾರ ಈ ಒಂದು 1984 ರಿಂದ 1991ರವರೆಗೆ ಕೊಟ್ಟಿರುವ ವಾರ್ಷಿಕ ಬಡ್ತಿಯನ್ನು ವಾಪಸ್ ತೆಗೆದುಕೊಳ್ಳಲು ಒಂದು ಆದೇಶ ಹೊರಡಿಸಿದೆ. ಇದು ಖಾಯಂಗೊಂಡ ಗುತ್ತಿಗೆ ಶಿಕ್ಷಕರಿಗೆ ದೊಡ್ಡ ತೊಂದರೆಯಾಗಿದೆ. ಇದರ ಪರಿಣಾಮವಾಗಿ ಪ್ರತಿಯೊಬ್ಬ ಶಿಕ್ಷಕನೂ ಕೂಡ ಇವತ್ತು ಸುಮಾರು ಐನೂರರಿಂದ ಸಾವಿರದ ನಾನೂರು ರೂಪಾಯಿಗಳವರೆಗೆ ತನ್ನ ಸಂಬಳದಲ್ಲಿ ಕಡಿತವನ್ನು ಎದುರಿಸುವಂಥ ವ್ಯವಸ್ಥೆಯಾಗಿದ್ದು, ಶಿಕ್ಷಕರು ಜೀವನ ನಡೆಸುವುದಕ್ಕೆ ತೊಂದರೆಯಾಗುವಂಥ ಸಂಗತಿಯಾಗಿದೆ. ಆದಕಾರಣ ನಾನು ಸರ್ಕಾರದವರಲ್ಲಿ ಕೇಳಿ ಕೊಳ್ಳುತ್ತಿದ್ದೇನೆ, ಇವತ್ತಿನ ಈ ಪರಿಸ್ಥಿತಿಯಲ್ಲಿ, ಸಂಬಳವನ್ನು ಜಾಸ್ತಿ ಮಾಡಬೇಕೆಂದು ಹೇಳುವಂಥ ಒಂದು ಪರಿಸ್ಥಿತಿ ಇರುವ ಸಂದರ್ಭದಲ್ಲಿ ಹಿಂದೆ ಏನು ಒಂದು ಒಡಂಬಡಿಕೆ ಆಗಿತ್ತು ಅದನ್ನು ಇವತ್ತು ರದ್ದು ಪಡಿಸಿ ತಕ್ಷಣ ಅವರಿಗೆ ಈ ತೊಂದರೆ ಮಾಡಿದ್ದು ದೊಡ್ಡ ಬೇಸರದ ಸಂಗತಿ, ಈ ಆದೇಶವನ್ನು ತಕ್ಷಣ ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕು. ಇವತ್ತು ನಾಲ್ಕರಿಂದ ಐದು ಸಾವಿರದವರೆಗೆ ಶಿಕ್ಷಕರು ದೊಡ್ಡ ರ್‍ಯಾಲಿಯನ್ನು ನಡೆಸುತ್ತಿದ್ದಾರೆ, ಆ ರ್‍ಯಾಲಿಯಿಂದ ಸರ್ಕಾರದ ಕಣ್ಣುತೆರೆಸಬೇಕೆಂದು ಪ್ರಯತ್ನ ಪಟ್ಟಿದ್ದಾರೆ.